ಕರ್ನಾಟಕ ವಿಧಾನ ಸಭೆ

ಬುಧವಾರ, 1ನೇ ಫೆಬ್ರವರಿ ತಿಂಗಳು 1984

ವಿಧಾನ ಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ 11 ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. **ಚಂದ್ರೇಗೌಡ**) ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು.

ಪ್ರಶ್ನೆ : 172 (551) ಶ್ರೀ ಅಬ್ದುಲ್ ನಜೀರ್‌ಸಾಬ್ .—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಮಾಹಿತಿ ಇನ್ನೂ ಬಂದಿಲ್ಲವಾದ್ದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಶ್ನೆ : 173 (530) (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ : 174 (202) ಶ್ರೀ ಅಬ್ದುಲ್ ನಜೀರ್‌ಸಾಬ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲವಾದ್ದರಿಂದ ಇದನ್ನು ಇನ್ನೊಂದು ದಿವಸ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ವಿಷಯ : ಬಾಗಲಕೋಟೆಯಲ್ಲಿ N R. E P. ಯೋಜನೆಯನ್ವಯ ಸಮಾಜವಂದಿರದ ಮಂಜೂರಾತಿ.

ಪ್ರಶ್ನೆ : 175 (180) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ) .—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವರು ಈ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಗುಳೇದಗುಡ್ಡ ಕ್ಷೇತ್ರದ ಬಾಗಲ ಕೋಟೆ ತಾಲ್ಲೂಕಿನ ಬೆನಕಟ್ಟಿ ಗ್ರಾಮಕ್ಕೆ ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಕಾರ್ಯಕ್ರಮದ ಯೋಜನೆಯಿಂದ ಕುರುಬರ ಸಮಾಜ ಮಂದಿರ ಮಂಜೂರು ಆದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಆದರ ವಿವರಗಳೇನು ?

ಉತ್ತರ: ಶ್ರೀ ಅಬ್ದುಲ್ ನಜೀರ್‌ಸಾಬ್(ಗ್ರಾಮೀಣಾಭಿವೃದ್ಧಿ ಸಚಿವರು). —ಅ) ಹೌದು. ಬಂದಿದೆ.

ಆ) ಕಟ್ಟಡದ ಅಂದಾಜು ವೆಚ್ಚ ರೂ. 37,830-00 ಅಧ್ಯಕ್ಷರು, ಕುರಿ ಸಹಕಾರ ಸಂಘ, ಬೆನಕಟ್ಟಿ ಇವರ ಮುಖಾಂತರ ಕುರುಬರ ಸಮಾಜದ ಜನಗಳು ಬೆನಕಟ್ಟಿ ಗ್ರಾಮ ಇವರಿಂದ ವಸೂಲಾದ ಹಣ ರೂ. 6,500-00. ಇದುವರೆಗೆ ಖರ್ಚು ಮಾಡಿದ ಹಣ ರೂ. 16,941-00. ಈಗ ಈ ಕಟ್ಟಡವನ್ನು ಕಟ್ಟುತ್ತಿದ್ದಾರೆ ಮತ್ತು ಮೇಲ್ಛಾವಣಿವರೆಗೆ ಈ ಕಟ್ಟಡವು ಬಂದಿರುತ್ತದೆ. ಈ ವರ್ಷವೇ ಕಟ್ಟಡವನ್ನು ಪೂರ್ತಿಗೊಳಿಸಲಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ವಿ ಬನ್ನಿ. — ಸ್ವಾಮಿ, ಈ ಕಟ್ಟಡ ಕಳೆದ 3 ವರ್ಷದ ಹಿಂದೆ ಮೇಲ್ಛಾವಣಿ ಹಂತಕ್ಕೆ ಬಂದಿದ್ದುದು ಇವತ್ತಿನವರೆಗೂ ಇದು ಈ ಹಂತದಲ್ಲೇ ಇದೆ. ಇದು ಬಹಳ ನಿಧಾನವಾಗಿರುವುದರಿಂದ ದಯವಿಟ್ಟು ಇದಕ್ಕೆ ಈ ಆಯವ್ಯಯ ವರ್ಷದಲ್ಲೇ ಹೆಚ್ಚು ಹಣವನ್ನೊದಗಿಸಿ ಪೂರ್ತಿಗೊಳಿಸಲು ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್.— ಇದು ಬಹಳ ನಿಧಾನವಾಗಿದೆ ಎಂದು ಗೊತ್ತಿದೆ. ಆದ್ದರಿಂದ ಈ ಪ್ರಸಕ್ತ ಸಾಲಿನಲ್ಲಿ ಇದಕ್ಕೆ ಹೆಚ್ಚಿನ ಹಣವನ್ನೊದಗಿಸಿ ಆದಷ್ಟು ಬೇಗ (ಮಾರ್ಚಿಯೊಳಗೆ) ಮುಗಿಸಿಕೊಡುತ್ತೇವೆ.

ಪ್ರಶ್ನೆ : 573 (424).— (ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಪ್ರಶ್ನೆ : 178 (368) ಶ್ರೀ ಅಬ್ದುಲ್ ನಜೀರ್‌ಸಾಬ್.— ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲವಾದ್ದರಿಂದ ಇದನ್ನು ತಡೆಹಿಡಿಯಬೇಕೆಂದು ಕೋರುತ್ತೇನೆ.

ಪ್ರಶ್ನೆ : 129 (225) ಅಧ್ಯಕ್ಷರು.— ಈ ಪ್ರಶ್ನೆಯನ್ನು ಅನಂತರ ತೆಗೆದುಕೊಳ್ಳಲಾಗುತ್ತದೆ.

ವಿಷಯ : ಧಾರವಾಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸೌಕರ್ಯ

ಪ್ರಶ್ನೆ : 180 (206) ಶ್ರೀ ಎಂ. ಜಿ. ಜರತಾರ್‌ಗರ್ (ಹುಬ್ಬಳ್ಳಿ).— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಧಾರವಾಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದ ಗ್ರಾಮಗಳ ಸಂಖ್ಯೆ ಎಷ್ಟು; ಹಾಗೂ ಆ ಗ್ರಾಮಗಳಲ್ಲಿ ಕೊಳವೆ ಭಾವಿಗಳ ವ್ಯವಸ್ಥೆ ಮಾಡಲಾಗಿದೆಯೆ;

ಆ) ಮೇಲ್ಕಂಡ ಗ್ರಾಮಗಳಿಗೆ ನೀರಿನ ಗಾಡಿಗಳ ಮುಖಾಂತರ ಪ್ರತಿದಿನ ನೀರು ಪೂರೈಸಲಾಗುತ್ತಿರುವ ಹಳ್ಳಿಗಳೆಷ್ಟು;

ಇ) ಹುಬ್ಬಳ್ಳಿ ತಾಲ್ಲೂಕಿನ ಹಳ್ಳಿಗಳಿಗೆ ನೀರಿನ ಗಾಡಿಗಳ ಮುಖಾಂತರ ಪ್ರತಿದಿನ ಪೂರೈಸಿದ ನೀರಿಗಾಗಿ 1981-82 ಹಾಗೂ 82-83 ಹಾಗೂ 83-84ರಲ್ಲಿ ಬಂದ ಖರ್ಚಿನ ವಿವರಗಳೇನು;

ಈ) ಮೇಲ್ಕಂಡ ಗ್ರಾಮಗಳಲ್ಲಿ ಖಾಯಂ ನೀರು ಪೂರೈಕೆಯ ಯೋಜನೆ ಸರಕಾರದವರ ಪರಿಶೀಲನೆಯಲ್ಲಿದೆಯೇ; ಹಾಗಿದ್ದಲ್ಲಿ ಆದರ ವಿವರಗಳೇನು ಹಾಗೂ ಕೊಳವೆ ಭಾವಿಗಳ ಯೋಜನೆ ಸಫಲವಾಗಿಲ್ಲದಿರುವುದಕ್ಕೆ ಕಾರಣವೇನು ?

ಉತ್ತರ : ಶ್ರೀ ಅಬ್ದುಲ್ ನಜೀರ್‌ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು) — ಅ) ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದ ಗ್ರಾಮಗಳ ಸಂಖ್ಯೆ 42. ಕುಡಿಯಲು ಯೋಗ್ಯವಾದ ನೀರು ಇಲ್ಲದ ಸವಳು ಪ್ರದೇಶದಲ್ಲಿ ಈ ಗ್ರಾಮಗಳಿರುವುದರಿಂದ ಈ ಗ್ರಾಮಗಳಲ್ಲಿ ಕೊರೆದ ಕೊಳವೆ ಬಾವಿಗಳು ಯಶಸ್ವಿಯಾಗಿಲ್ಲ.

ಆ) ಪ್ರಸಕ್ತ ಸಾಲಿನಲ್ಲಿ ಸದ್ಯಕ್ಕೆ 6 ಗ್ರಾಮಗಳಿಗೆ ನೀರಿನ ಗಾಡಿಗಳ ಮೂಲಕ ನೀರನ್ನು ಪೂರೈಸಲಾಗುತ್ತಿದೆ.

ಇ) ಜನಾರೋಗ್ಯ ಶಿಲ್ಪಕಾರ್ಯ ಇಲಾಖೆಯಿಂದ ಖರ್ಚಾದ ವಿವರಗಳು ಕೆಳಕಂಡಂತೆ ಇದೆ;

1981-82	:	ರೂ. 3.01 ಲಕ್ಷ
1982-83	:	ರೂ. 1.57 ಲಕ್ಷ
1983-84	:	ರೂ. 0.30 ಲಕ್ಷ

ಈ) ಮೇಲ್ಕಂಡ ಗ್ರಾಮಗಳು ಸವಳು ಪ್ರದೇಶದಲ್ಲಿರುವುದರಿಂದ ಕೊಳವೆ ಬಾವಿ ತೋಡಿ ಪಡೆಯುವ ನೀರು ಕುಡಿಯಲು ಯೋಗ್ಯವಲ್ಲವೆಂದು ರಾಸಾಯನಿಕ ಪರೀಕ್ಷೆಯಿಂದ ಖಚಿತವಾಗಿದೆ. ಕಾರಣ ಈ ಗ್ರಾಮಗಳಿಗೆ ನವಲಗುಂದ ತಾಲ್ಲೂಕಿನ ತುವರಿಹಳ್ಳದಿಂದಲೂ ಮತ್ತು ಮಲಪ್ರಭಾ ಕಾಲುವೆ—ಉಪ ಕಾಲುವೆಯಿಂದ ನೀರು ಸರಬರಾಜು ಮಾಡಲು ಸಮಗ್ರ ಯೋಜನೆಯೊಂದನ್ನು ರೂಪಿಸಲಾಗುತ್ತಿದೆ. ಈ ಯೋಜನೆಗಾಗಿ 3 ಕೋಟಿ ರೂಪಾಯಿಗಳು ಬೇಕಾಗುವುದರಿಂದ ಈ ಪ್ರಸ್ತಾಪವು ಸರಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಜಿ. ಜರತಾರಗರ್.— ಸ್ವಾಮಿ, ಹುಬ್ಬಳ್ಳಿ ತಾಲ್ಲೂಕು, ನವಲಗುಂದ ತಾಲ್ಲೂಕು, ಹಾಗೂ ಕುಂದಗೋಳ ತಾಲ್ಲೂಕುಗಳಲ್ಲಿ ಕೆಲವು ಹಳ್ಳಿಗಳಲ್ಲಿ ಸಧ್ಯಕ್ಕೆ ಕುಡಿಯುವ ನೀರನ್ನು ಗಾಡಿಗಳ ಮೂಲಕ ಪ್ರತಿದಿನ ಪೂರೈಸಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದೀರಿ. ಆ ಹಳ್ಳಿಗಳು ಯಾವುವು ಎಂಬುದನ್ನು ಸ್ಪಷ್ಟಪಡಿಸುವಿರಾ ?

ಶ್ರೀ ಅಬ್ದುಲ್ ನಜೀರ್‌ಸಾಬ್. — ಆ ಹಳ್ಳಿಗಳು ಈ ರೀತಿ ಇವೆ :

1) ಹುಬ್ಬಳ್ಳಿ ತಾಲ್ಲೂಕು.— ಕುಸುಗಲ್ಲ, ಮಂಟೂರ, ಹಳ್ಯಾಳ, ನಾಗರಹಳ್ಳಿ, ಶಿರಗುಪ್ಪಿ, ಉಮಚಗಿ
2) ನವಲಗುಂದ ತಾಲ್ಲೂಕು.— ಸೊಟಕಿನಹಾಳ, ದಾಟನಾಳ, ಚಿಲಕವಾಡಿ.
3) ಕುಂದಗೋಳ ತಾಲ್ಲೂಕು.— ಹಿರೇನರ್ತಿ, ಯಾಗುಪ್ಪಿ, ಚಿಕ್ಕನರ್ತಿ, ಬಸಾಪುರ, ಕಡಪಟ್ಟಿ.

ಶ್ರೀ ಎಂ. ಜಿ. ಜರತಾರಗರ್.— ಸ್ವಾಮಿ, ನವಲಗುಂದ ತಾಲ್ಲೂಕಿನ ತುವರಿಹಳ್ಳ ಹಾಗೂ ಮಲಪ್ರಭಾ ಕಾಲುವೆ—ಉಪ ಕಾಲುವೆಯಿಂದ ನೀರು ಸರಬರಾಜು ಮಾಡಲು ಇನ್ನೂ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಅಬ್ದುಲ್ ನಜೀರ್‌ಸಾಬ್.— ನಾನು ನನ್ನ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದರಿಂದ ಕೊಳವೆ ಬಾವಿಗಳನ್ನು ತೋಡಲು ನೋಡಿದಾಗ ಅವೂ ಕೂಡ ಯಶಸ್ವಿಯಾಗಲಿಲ್ಲ. ಇದಕ್ಕಾಗಿ ಬೇರೆ ಯೋಜನೆಯನ್ನು ಕೈಗೆ ತೆಗೆದುಕೊಳ್ಳಲು ಸುಮಾರು 3 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಬಗ್ಗೆ ಆರ್ಥಿಕ ನೆರವನ್ನು ಕೇಂದ್ರ ಸರ್ಕಾರದಿಂದ ಆಗಲಿ ಅಥವಾ ಬೇರೆ ದೇಶದಿಂದ ಆಗಲಿ ನೀಡುವಂತೆ ನಾವು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ಅದು ಇನ್ನೂ ನಮಗೆ ಬಂದಿಲ್ಲ. ಅದು ಬಂದಾಗ ಈ ಯೋಜನೆ ತೆಗೆದುಕೊಳ್ಳುತ್ತೇನೆ.

ಇದೇ ಸಂದರ್ಭದಲ್ಲಿ ಇನ್ನೊಂದು ವಿಚಾರ ಹೇಳುವುದಾದರೆ, ಹುಬ್ಬಳ್ಳಿ–ಧಾರವಾಡ ನಗರ ಪ್ರದೇಶಕ್ಕೆ ಏನು ನೀರು ಒದಗಿಸಲಾಗುತ್ತಿದೆ, ಅದರಲ್ಲಿ 1 ಲಕ್ಷ ಗ್ಯಾಲನ್ ನೀರನ್ನು ಆ ನಗರಸಭೆಯವರು ಕೊಡುವುದಾದರೆ ಈ 42 ಗ್ರಾಮಗಳ ಪೈಕಿ ಕೊನೆಯಪಕ್ಷ 13 ಗ್ರಾಮಗಳಿಗಾದರೂ ನಾವು ನೀರನ್ನು ಕೊಡಬಹುದು.

ಶ್ರೀ ಎಂ. ಬಿ. ಜರತಾರಗರ್.— ಈಗಾಗಲೇ ತಾವು ಹೇಳಿದಂತೆ ಆರು ಹಳ್ಳಿಗಳಿಗೆ ನೀರಿನ ಬಿಕ್ಕಟ್ಟು ಇರುತ್ತದೆ. ತಾವು ಕೊಡುತ್ತಿರುವ ನೀರು ಬಹಳ ಕಡಿಮೆಯದಾಗಿರುತ್ತದೆ. ಕನಿಷ್ಟಪಕ್ಷ ಮುನ್ನೂರು

ಗ್ಯಾಲನ್ ನೀರನ್ನಾದರೂ ಕೊಡಬೇಕು. ನೀರನ್ನು ಒದಗಿಸಲು ಲಾರಿಗಳು ಸಂಪೂರ್ಣವಾಗಿ ಕೆಟ್ಟಿರುತ್ತವೆ. ಅರ್ಧಭಾಗದಷ್ಟು ನೀರು ಇದರಿಂದ ಪೋಲಾಗುತ್ತಿರುತ್ತದೆ ಆದ್ದರಿಂದ ರಿಪೇರಿ ಮಾಡತಕ್ಕಂಥ ವ್ಯವಸ್ಥೆಯನ್ನು ತಹಸೀಲ್‌ದಾರರಿಗೆ ಒಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.— ಕುಡಿಯುವ ನೀರಿಗಾಗಿ ಏನು ವ್ಯವಸ್ಥೆ ಮಾಡಿದ್ದೇವೆ ಎಂದರೆ ಟ್ಯಾಂಕರ್‌ಗಳ ಮೂಲಕ ನೀರನ್ನು ಸಾಕಾಣಿಕೆ ಮಾಡತಕ್ಕಂಥ ವ್ಯವಸ್ಥೆಯಿಂದ ಡೀಸಲ್ ಮತ್ತು ಪೆಟ್ರೋಲ್ ಇದರ ವೆಚ್ಚ ಜಾಸ್ತಿಯಾಗಿ ಬರುತ್ತಿರುತ್ತದೆ. ಇಲಾಖೆಯ ವ್ಯವಸ್ಥೆಯಲ್ಲಿರತಕ್ಕಂಥ ಲಾರಿಗಳನ್ನೇ ಉಪಯೋಗಿಸಿಕೊಂಡು ನೀರನ್ನು ಒದಗಿಸಲಾಗುತ್ತಿರುತ್ತದೆ. ಆದರೆ ಹೆಚ್ಚು ನೀರಿನ ವ್ಯವಸ್ಥೆಯಾಗಬೇಕಾದರೆ ಬಾಡಿಗೆ ಲಾರಿಗಳನ್ನು ಉಪಯೋಗಿಸಿಕೊಂಡು ಒದಗಿಸಬೇಕಾಗುತ್ತದೆ. ಮತ್ತೆ ಟ್ಯಾಂಕರ್‌ಗಳು ಹಾಳಾಗಿದ್ದರೆ ಅದನ್ನು ಶುದ್ಧಗೊಳಿಸಿ ನೀರನ್ನು ಒದಗಿಸಲಾಗುತ್ತದೆಂದು ಹೇಳುತ್ತೇನೆ.

ವಿಷಯ : ಬೆಂಗಳೂರು ಡೈರಿ ಅಭಿವೃದ್ಧಿ ಪ್ರಾಧಿಕಾರದವರಿಂದ ಹಾಲು ಮಾರ್ಗವನ್ನು ಶ್ರೀನಿವಾಸಪುರ ತಾಲ್ಲೂಕಿನವರೆಗೆ ವಿಸ್ತರಿಸುವ ಬಗ್ಗೆ.

ಪ್ರಶ್ನೆ : 181 (396) ಶ್ರೀ ಜಿ ಕೆ. ವೆಂಕಟಶಿವರೆಡ್ಡಿ (ಶ್ರೀನಿವಾಸಪುರ).—ಮಾನ್ಯ ಪಶುಸಂಗೋಪನಾ ಹಾಗೂ ಪಶುವೈದ್ಯ ಮತ್ತು ತೋಟಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಡೈರಿ ಅಭಿವೃದ್ಧಿ ಪ್ರಾಧಿಕಾರದವರಿಂದ ಹಾಲು ಮಾರ್ಗವನ್ನು ಶ್ರೀನಿವಾಸಪುರ ತಾಲ್ಲೂಕಿಗೆ ವಿಸ್ತರಿಸುವ ಪ್ರಸ್ತಾವನೆ ಯಾವುದಾದರೂ ಸರ್ಕಾರದ ಮುಂದೆ ಇದೆಯೇ;

ಆ) ಹಾಗಾದರೆ, ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ?

ಉತ್ತರ : ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶುಸಂಗೋಪನಾ ಹಾಗೂ ಪಶುವೈದ್ಯ ಮತ್ತು ತೋಟಗಾರಿಕೆ ಮಂತ್ರಿಗಳು.— ಅ) ಹೌದು "ಇದೆ".

ಆ) ಬೆಂಗಳೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತವು 11 ಡೈರಿ ಸಹಕಾರಿ ಸಂಘಗಳಿಗೆ ಒಂದು ಹಾಲಿನ ಮಾರ್ಗವನ್ನು ಸ್ಥಾಪಿಸಿದ್ದಾರೆ. ಇದರಲ್ಲಿ ಮೂರು ಸಂಘಗಳು ಕಾರ್ಯಾಚರಣೆ ಮಾಡುತ್ತಿವೆ. ಮತ್ತು ಮಿಕ್ಕ ಎಂಟು ಸಂಘಗಳನ್ನು ಸ್ಥಾಪಿಸಬೇಕಾಗಿದೆ. ಹೀಗಾಗಿ ಎಲ್ಲ ಹನ್ನೊಂದು ಡೈರಿ ಸಹಕಾರ ಸಂಘಗಳು ಸ್ಥಾಪನೆಯಾದ ಮೇಲೆ ಇಲ್ಲಿನ ಹಾಲಿನ ಮಾರ್ಗ ಕಾರ್ಯಾರಂಭ ಮಾಡಲು ಆರಂಭಿಸುತ್ತದೆ.

ಶ್ರೀ ಎಂ.ಪಿ. ಪ್ರಕಾಶ್.— ಮಾನ್ಯ ಪಶುಸಂಗೋಪನಾ ಸಚಿವರ ಪರವಾಗಿ ಉತ್ತರವನ್ನು ಕೊಡುತ್ತೇನೆ.

ಶ್ರೀ ಬಿ.ಕೆ. ವೆಂಕಟಶಿವರೆಡ್ಡಿ — ನಮ್ಮ ಶ್ರೀನಿವಾಸಪುರ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕಾಗಿರುತ್ತದೆ. ಐ.ಆರ್.ಡಿ.ಪಿ. ಮೂಲಕ ಬಡವರಿಗಾಗಿ ಹಸುಗಳನ್ನು ಕೊಟ್ಟಿದ್ದಾರೆ. ಅವರು ಉತ್ಪಾದನೆ ಮಾಡತಕ್ಕಂಥ ಹಾಲನ್ನು ನೆರೆರಾಜ್ಯವಾದ ಆಂಧ್ರ ಪ್ರದೇಶದವರಿಂದ ಖರೀದಿಮಾಡಲಾಗುತ್ತಿದೆ. ಅವರು ಕೊಡತಕ್ಕಂಥ ರೇಟ್ ಕಡಿಮೆಯಿರುತ್ತದೆ. ಆದ್ದರಿಂದ ಬಡ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಇದನ್ನು ನಿವಾರಣೆ ಮಾಡುವುದಕ್ಕೆ ಡೈರಿ ಡೆವಲಪ್‌ಮೆಂಟ್‌ನವರು ಎಷ್ಟು ದಿವಸಗಳಲ್ಲಿ ಈ ಹಾಲನ್ನು ತೆಗೆದುಕೊಳ್ಳುವ ಕಾರ್ಯಕ್ರಮವನ್ನು ಮಾಡುತ್ತಾರೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್.— ಈಗಾಗಲೇ ಕೋಲಾರ ಜಿಲ್ಲೆಯ ಶೀತಲ ಕೇಂದ್ರದ ಸ್ಥಾಪನೆಯ ಕೆಲಸವು ಪರಾಕಾಷ್ಠೆ ಮುಟ್ಟಿದೆ. ಚಿಂತಾಮಣಿಯಲ್ಲಿ ಚಿಲ್ಲಿಂಗ್ ಪ್ಲಾಂಟ್ ಹಾಕುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಶ್ರೀನಿವಾಸಪುರದಲ್ಲಿ ಮೂರು ಡೈರಿಗಳನ್ನು ಪ್ರಾರಂಭಮಾಡಲಾಗಿದೆ. ಇನ್ನೂ ಎಂಟು ಡೈರಿಗಳನ್ನು ಪ್ರಾರಂಭ ಮಾಡಬೇಕಾಗಿರುತ್ತದೆ.

ಶ್ರೀ ಎನ್. ಚಿಕ್ಕೇಗೌಡ.— ಚಿಂತಾಮಣಿಯಲ್ಲಿ ಮೊದಲಿನಿಂದಲೂ ಇದೆ. ಇದನ್ನು 1978-79 ರಲ್ಲಿಯೇ ಪ್ರಾರಂಭ ಮಾಡಲಾಯಿತು. ಮಿಲ್ಕ್ ಫುಡ್ ತಯಾರು ಮಾಡತಕ್ಕಂಥ ಫ್ಯಾಕ್ಟರಿಗಳು ಅಂದರೆ ಅಮುಲ್‌ನಂಥ ಫ್ಯಾಕ್ಟರಿಗಳು ಅಲ್ಲಲ್ಲಿಯೇ ಹಾಲನ್ನು ಉತ್ಪಾದನೆ ಮಾಡತಕ್ಕಂಥ ಸೊಸೈಟಿಗಳಿಗೆ, ಇನ್‌ಸ್ಟಿಟ್ಯೂಷನ್‌ಗಳಿಗೆ ಸ್ಥಳವನ್ನು ಕೊಟ್ಟು, ಉತ್ಪಾದನೆಯಾಗತಕ್ಕಂಥ ಹಾಲನ್ನು ಅವರೇ ನೇರವಾಗಿ ಕೊಂಡುಕೊಳ್ಳತಕ್ಕಂಥ ವ್ಯವಸ್ಥೆ ಇರುತ್ತದೆ. ಇದೆಲ್ಲ ಕಾರ್ಯಕ್ರಮಗಳನ್ನು ಮೊದಲೇ ಮಾಡಿದರೆ ಹಾಲಿನ ಉತ್ಪಾದನೆಯು ಹೆಚ್ಚಿ ಬೆಂಗಳೂರು ಡೈರಿಗೂ ಅನುಕೂಲವಾಗುತ್ತದೆ. ಹಾಲನ್ನು ಉತ್ಪಾದನೆ ಮಾಡುವವರಿಗೂ ಅನುಕೂಲವಾಗುತ್ತದೆ. ಇದೆಲ್ಲ ವರ್ಲ್ಡ್‌ಬ್ಯಾಂಕ್‌ಏಡ್‌ನಲ್ಲಿ ಬರತಕ್ಕಂಥ ಪ್ರಾಜೆಕ್ಟ್ ಆಗಿರುವುದರಿಂದ ಇದಕ್ಕೆ ಮುಂಜಾಗ್ರತೆಯ ಕ್ರಮ ತೆಗೆದುಕೊಳ್ಳಬೇಕಾಗಿತ್ತೆಂದು ಹೇಳುತ್ತೇನೆ.

ಶ್ರೀ ಎಂ.ಪಿ ಪ್ರಕಾಶ್.— ತಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.— ಹನ್ನೊಂದು ಸೊಸೈಟಿಗಳು, ಹಾಲಿನ ಉತ್ಪಾದನೆಯ ಸಹಕಾರಿ ಸಂಘ